ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ–೬**

# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತ ಮೂರನೇ ಅಧಿವೇಶನ

## ಮಂಗಳವಾರ, ದಿನಾಂಕ: ೨೩ನೇ ಜುಲೈ, ೨೦೨೪

---

## ಸಮೂಹ – II

೧. ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

೨. ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

೩. ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

೪. ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

೫. ಪೌರಾಡಳಿತ ಹಾಗೂ ಹಜ್ ಸಚಿವರು

೬. ಸಹಕಾರ ಸಚಿವರು

೭. ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು

---

## ಗದಗ ಜಿಲ್ಲೆಯ ಕಪ್ಪತಗುಡ್ಡದ ಸುತ್ತ ಮುತ್ತಲಿರುವ ಮಣ್ಣಿನಲ್ಲಿ ಕಬ್ಬಿಣದ ಅಂಶ ಇರುವ ಬಗ್ಗೆ

**ಶ್ರೀ ಎಸ್. ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) –**

೭೬ (೮೦೩) ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಗದಗ ಜಿಲ್ಲೆಯ ಕಪ್ಪತಗುಡ್ಡದ ಸುತ್ತ ಮುತ್ತಲಿರುವ ಮಣ್ಣಿನಲ್ಲಿ ಕಬ್ಬಿಣದ ಅಂಶ ಇರುವುದು ನಿಜವೇ;

(ಆ) ಇತ್ತೀಚಿನ ದಿನಗಳಲ್ಲಿ ಭೂಗಳ್ಳರು ಕಬ್ಬಿಣದ ಅಂಶ ಇರುವ ಮಣ್ಣನ್ನು ರಾತ್ರೋರಾತ್ರಿ ಅಗೆದು ಲಕ್ಕುಂಡಿ, ಮುಂಡರಗಿ ತಾಲ್ಲೂಕಿನ ಪೇಟಾಲೂರು ಹಳ್ಳಿಗುಡಿ, ಹಳ್ಳಿಕೇರಿ ಗ್ರಾಮಗಳ ಸಮೀಪ ಗೌಪ್ಯ ಸ್ಥಳದಲ್ಲಿ ಸಂಗ್ರಹಿಸುತ್ತಿರುವ ಮಾಹಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಭೂಗಳ್ಳರು ಅಕ್ರಮವಾಗಿ ರಾತ್ರಿ ವೇಳೆ ಕಬ್ಬಿಣದ ಅಂಶವಿರುವ ಮಣ್ಣನ್ನು ತೆಗೆಯುತ್ತಿರುವುದಕ್ಕೆ ಸಂಬಂಧಿಸಿದಂತೆ ಸುತ್ತ ಮುತ್ತಲಿನ ಗ್ರಾಮಸ್ಥರು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳಲ್ಲಿ ದೂರು ಕೊಟ್ಟರೂ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣವೇನು; ಹಾಗಿದ್ದಲ್ಲಿ, ಇವರುಗಳ ಮೇಲೆ ತೆಗೆದುಕೊಳ್ಳುವ ಕ್ರಮಗಳೇನು?

## ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿನ ಅವ್ಯವಹಾರದ ತನಿಖಾ ವರದಿ ಕುರಿತು

**ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು) –**

೭೭ (೭೪೮) ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಕೋಟ್ಯಾಂತರ ರೂಪಾಯಿ ಅವ್ಯವಹಾರವಾಗಿರುವ ದೂರಿನ ಬಗ್ಗೆ ನೇಮಿಸಲಾದ ಎರಡು ತನಿಖಾ ತಂಡಗಳು ಸರ್ಕಾರಕ್ಕೆ ತನಿಖಾ ವರದಿ ಸಲ್ಲಿಸಿರುವುದು ನಿಜವೇ;

(ಆ) ತನಿಖಾ ವರದಿ ಸಲ್ಲಿಸಿದ್ದಲ್ಲಿ, ವರದಿಯ ಮುಖ್ಯಾಂಶಗಳೇನು;

(ಇ) ವರದಿಯಲ್ಲಿ ಈ ಹಿಂದಿನ ಅಧ್ಯಕ್ಷರ ವಿರುದ್ದ ಕ್ರಿಮಿನಲ್ ದೂರು ದಾಖಲಿಸುವಂತೆ ಸರ್ಕಾರ ಆದೇಶಿಸಿದೆಯೇ;

(ಈ) ಆದೇಶಿಸಿದ್ದಲ್ಲಿ, ಈವರೆಗೂ ಕ್ರಿಮಿನಲ್ ಪ್ರಕರಣ ದಾಖಲಿಸದಿರಲು ಕಾರಣಗಳೇನು?

## ರಾಜ್ಯದಲ್ಲಿ ಸೆಮಿಕಂಡಕ್ಟರ್ ತಯಾರಿಕಾ ಕಂಪನಿಗಳನ್ನು ಸ್ಥಾಪಿಸುವ ಬಗ್ಗೆ

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) –**

೭೮ (೭೫೯) ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಪ್ರಪಂಚದಾದ್ಯಂತ ಸೆಮಿಕಂಡಕ್ಟರ್ ಚಿಪ್ ತಯಾರಿಕೆಯಲ್ಲಿ ಹಲವಾರು ದೇಶಗಳು ತೊಡಗಿಸಿಕೊಂಡಿದ್ದು, ಭಾರತವು ಸೆಮಿಕಂಡಕ್ಟರ್ ಚಿಪ್ ತಯಾರಿಕೆ ಬಗ್ಗೆ ಒಂದು ರಾಷ್ಟ್ರೀಯ ನೀತಿಯನ್ನು ಹೊರ ತಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಈ ರಾಷ್ಟ್ರೀಯ ನೀತಿಯ ರೂಪುರೇಷೆಗಳು ಯಾವುವು; ಮತ್ತು ಈ ಯೋಜನೆ ಅಡಿಯಲ್ಲಿ ಸೆಮಿಕಂಡಕ್ಟರ್ ತಯಾರಿಕಾ ಕಂಪನಿಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ದೊರೆಯುವ ನೆರವು ಮತ್ತು ಸವಲತ್ತುಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು)

(ಇ) ರಾಜ್ಯದಲ್ಲಿ ಸೆಮಿಕಂಡಕ್ಟರ್ ಚಿಪ್ ತಯಾರಿಕಾ ಕಂಪನಿಗಳನ್ನು ಆಕರ್ಷಿಸಿ, ಕಾರ್ಖಾನೆ ಸ್ಥಾಪಿಸಲು ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು)

(ಈ) ರಾಜ್ಯದಲ್ಲಿ ಇದುವರೆಗೂ ಎಲ್ಲೆಲ್ಲಿ ಸೆಮಿಕಂಡಕ್ಟರ್ ತಯಾರಿಕಾ ಕಂಪನಿಗಳನ್ನು ಸ್ಥಾಪಿಸಲಾಗಿದೆ? (ಪೂರ್ಣ ಮಾಹಿತಿ ನೀಡುವುದು)

## ಹೂ ಬೆಳೆಗಳಿಗೆ ಪ್ರೋತ್ಸಾಹ ನೀಡುವ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೭೯ (೭೪೨) ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಎಷ್ಟು ವಿಧವಾದ ಹೂಗಳನ್ನು ಬೆಳೆಯಲು ತೋಟಗಾರಿಕೆ ಇಲಾಖೆ ಪ್ರೋತ್ಸಾಹ ನೀಡುತ್ತದೆ; ರಾಜ್ಯದಲ್ಲಿ ಬೆಳೆಯುವ ಪ್ರಮುಖ ಹೂಗಳ ಹೆಸರಿನೊಂದಿಗೆ ವಿವರ ನೀಡುವುದು;

(ಆ) ರಾಜ್ಯವು ಎಷ್ಟು ಪ್ರಮಾಣದ ಹೂಗಳನ್ನು ರಫ್ತು ಮಾಡುತ್ತದೆ; ಹೂಗಳ ರಫ್ತು ಪ್ರಮಾಣ ಹೆಚ್ಚಿಸಲು ಸರ್ಕಾರ ರೈತರಿಗೆ ಯಾವ ರೀತಿಯ ಪ್ರೋತ್ಸಾಹ ನೀಡುತ್ತಿದೆ; (ವಿವರ ನೀಡುವುದು)

(ಇ) ಜಾಗತಿಕವಾಗಿ ಹೆಚ್ಚಾಗಿ ಉಪಯೋಗಿಸಲ್ಪಡುವ ಪುಷ್ಪ ತಳಿಗಳ ಅಭಿವೃದ್ಧಿ ಮತ್ತು ಹೊಸ ತಳಿಗಳ ಸಂಶೋಧನೆಗೆ ಸರ್ಕಾರ ಕೈಗೊಂಡ ಕ್ರಮಗಳೇನು;

(ಈ) ಪುಷ್ಪ ತಳಿಗಳ ಅಭಿವೃದ್ಧಿ ಮತ್ತು ಸಂಶೋಧನೆಗೆ ಕಳೆದ ಎರಡು ವರ್ಷದಲ್ಲಿ ಸರ್ಕಾರ ಎಷ್ಟು ಮೊತ್ತ ಖರ್ಚು ಮಾಡಿದೆ ಹಾಗೂ ಎಷ್ಟು ರೈತರನ್ನು ಪುಷ್ಪ ಬೆಳೆಗಾರರೆಂದು ಗುರುತಿಸಿದೆ? (ಜಿಲ್ಲಾವಾರು ಬೆಳೆವಾರು ವಿವರ ನೀಡುವುದು)

## ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸುವ ಕುರಿತು

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) –**

೮೦ (೮೦೪) ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಉದ್ಯೋಗಗಳನ್ನು ಸೃಷ್ಟಿಸಲು ಇದುವರೆವಿಗೂ ಯಾವ ಯಾವ ಕೈಗಾರಿಕೆಗಳನ್ನು ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಂಡಿದೆ; (ವಿವರ ನೀಡುವುದು)

(ಆ) ಈ ಭಾಗದಲ್ಲಿ ಕಳೆದ ೨ ವರ್ಷಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಬಂಡವಾಳ ಹೂಡಿಕೆ ಮಾಡಲು ಯಾವ ಯಾವ ಕಂಪನಿಗಳು ಒಪ್ಪಂದ ಮಾಡಿಕೊಂಡಿವೆ;

(ಇ) ಕಳೆದ ೨ ವರ್ಷಗಳಲ್ಲಿ ಸರ್ಕಾರವು ರಾಜ್ಯದಲ್ಲಿ ಬಂಡವಾಳ ಸಮಾವೇಶವನ್ನು ಆಯೋಜಿಸಿದೆಯೇ; ಹಾಗಿದ್ದಲ್ಲಿ, ಈ ಬಂಡವಾಳ ಸಮಾವೇಶದಲ್ಲಿ ಯಾವ ಯಾವ ಒಪ್ಪಂದಗಳಿಗೆ ಸಹಿಯಾಗಿವೆ;

(ಈ) ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಬಂಡವಾಳ ಹೂಡಲು ಸರ್ಕಾರ ಯಾವ ಯಾವ ಕ್ರಮ ಕೈಗೊಳ್ಳಲಾಗಿದೆ?

## ಕಲುಷಿತ ನೀರು–ಕುಡಿದು ಪ್ರಾಣಹಾನಿಯಾಗಿರುವ ಬಗ್ಗೆ

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೧ (೭೯೦) ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಎಲ್ಲೆಲ್ಲಿ ಕಲುಷಿತ ನೀರು ಸರಬರಾಜು ಪ್ರಕರಣಗಳು ಸಂಭವಿಸಿವೆ; ಕಲುಷಿತ ನೀರು ಸೇವನೆಯಿಂದಾಗಿ ಪ್ರಾಣಹಾನಿಗೆ ಒಳಗಾದವರ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಆ) ಕಲುಷಿತ ನೀರು ಪೂರೈಕೆಗೆ ಕಾರಣವಾದ ಅಂಶಗಳಾವುವು;

(ಇ) ಎಲ್ಲೆಲ್ಲಿ ಕುಡಿಯುವ ನೀರಿನ ಅಭಾವವಿದೆ; ಅಂತಹ ಕಡೆಗಳಲ್ಲಿ ಶುದ್ಧ ನೀರು ಸರಬರಾಜಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

## ರೈತರು ಪಡೆದಿರುವ ಸಾಲ ಮನ್ನಾ ಮಾಡುವ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) –**

೮೨ (೭೫೧) ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಸಹಕಾರಿ ಬ್ಯಾಂಕ್‌ಗಳಲ್ಲಿ ಕೃಷಿ ಚಟುವಟಿಕೆಗಳಿಗೆ ಸಾಲ ಪಡೆಯುವ ರೈತರ ಸಂಖ್ಯೆ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಕೃಷಿ ಸಾಲ ಹೆಚ್ಚಳಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ಒದಗಿಸುವುದು)

(ಆ) ಪ್ರಸಕ್ತ ಸಾಲಿನಲ್ಲಿ ಸಹಕಾರಿ ಬ್ಯಾಂಕ್‌ಗಳಲ್ಲಿ ಬೆಳೆ ಸಾಲಕ್ಕೆ ಬಂದ ಅರ್ಜಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಇ) ರೈತರ ಬೆಳೆ ಸಾಲಕ್ಕೆ ಬಂದ ಅರ್ಜಿಗಳಲ್ಲಿ ತಿರಸ್ಕೃತಗೊಂಡ ಮತ್ತು ಸಾಲ ಮಂಜೂರು ಮಾಡಿದ ಅರ್ಜಿಗಳೆಷ್ಟು; ನೀಡಿರುವ ಒಟ್ಟು ಸಾಲದ ಮೊತ್ತ ಎಷ್ಟು; (ಸಂಪೂರ್ಣ ಮಾಹಿತಿ ಒದಗಿಸುವುದು)

(ಈ) ಸಹಕಾರಿ ಬ್ಯಾಂಕ್‌ಗಳಲ್ಲಿ ಕೃಷಿ ಚಟುವಟಿಕೆಗಳಿಗೆ ಪಡೆದ ಸಾಲದ ಬಡ್ಡಿ ಮನ್ನಾ ಮಾಡಲು ಸರ್ಕಾರ ಕ್ರಮಕೈಗೊಳ್ಳುವುದೇ; ಈವರೆಗೆ ಎಷ್ಟು ಬಡ್ಡಿ ಮನ್ನಾ ಮಾಡಲಾಗಿದೆ; ಬಡ್ಡಿ ಮನ್ನಾ ಲಾಭ ಪಡೆದ ರೈತರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಉ) ರೈತರ ಸಾಲ ಮನ್ನಾ ಮಾಡುವ ಕುರಿತು ಸರ್ಕಾರ ಕ್ರಮಕೈಗೊಳ್ಳುವುದೇ; ಈ ಕುರಿತು ಸರ್ಕಾರದ ನಿಲುವೇನು?

## ಅನಧಿಕೃತ ಬಡಾವಣೆಗಳ ನಿರ್ಮಾಣದ ಬಗ್ಗೆ

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

ಲ಼಼ (೭೭೦) ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹುಬ್ಬಳ್ಳಿ ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಕಳೆದ ಒಂದು ವರ್ಷದ ಅವಧಿಯಲ್ಲಿ ಎಷ್ಟು ಬಡಾವಣೆ ನಿರ್ಮಾಣ ಮಾಡಲು ಅನುಮೋದನೆ ನೀಡಲಾಗಿದೆ;

(ಆ) ಅನಧಿಕೃತ ಬಡಾವಣೆಗಳು ನಿರ್ಮಾಣವಾಗಿರುವುದು ನಗರಾಭಿವೃದ್ಧಿ ಪ್ರಾಧಿಕಾರದ ಗಮನಕ್ಕೆ ಬಂದಿದೆಯೇ;

(ಇ) ಅನಧಿಕೃತ ಬಡಾವಣೆಗಳಿಗೆ ಸಂಬಂಧಿಸಿದಂತೆ ನಗರಾಭಿವೃದ್ಧಿ ಪ್ರಾಧಿಕಾರದಿಂದ ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ;

(ಈ) ಅನಧಿಕೃತ ಬಡಾವಣೆಗಳ ನಿರ್ಮಾಣ ತಡೆಯಲು ವಿಫಲರಾದ ಅಧಿಕಾರಿಗಳ ವಿರುದ್ಧ ಸರ್ಕಾರ ಯಾವ ರೀತಿಯ ಕ್ರಮ ಕೈಗೊಂಡಿದೆ?

## ಶಿರಾ ನಗರಸಭೆಯಲ್ಲಿನ ಅವ್ಯವಹಾರದ ಬಗ್ಗೆ

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) –**

ಲಳ (೮೩೫) ಪೌರಾಡಳಿತ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಶಿರಾ ನಗರಸಭೆಯ ವ್ಯಾಪ್ತಿಯಲ್ಲಿ ತೆರಿಗೆಗೆ ಒಳಪಟ್ಟ ಆಸ್ತಿಗಳ ಸಂಖ್ಯೆ ಎಷ್ಟು; ಇವುಗಳ ಬೇಡಿಕೆಯ ಮೊತ್ತವೆಷ್ಟು; ೨೦೨೩–೨೪ನೇ ಸಾಲಿನಲ್ಲಿ ವಸೂಲಾದ ಮೊತ್ತವೆಷ್ಟು; ಬಾಕಿಯಿರುವ ತೆರಿಗೆಯ ಮೊತ್ತವೆಷ್ಟು; ಸದರಿ ತೆರಿಗೆಯನ್ನು ವಸೂಲಿ ಮಾಡಲು ಕೈಗೊಂಡ ಕ್ರಮಗಳೇನು;

(ಆ) ತರಕಾರಿ ಮತ್ತು ಹೂವಿನ ಮಾರುಕಟ್ಟೆಯ ಸ್ಥಳವನ್ನು ಬಾಡಿಗೆಗಾಗಿ ಯಾವಾಗ ಹರಾಜು ಮಾಡಲಾಗಿತ್ತು; ಅದರ ಅವಧಿಯೆಷ್ಟು; ಅವಧಿ ಮುಗಿದರೂ ಈ ಹಿಂದೆ ಹರಾಜು ಪಡೆದವರೇ ಹಣ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದರಿಂದ ನಗರಸಭೆಗೆ ವಾರ್ಷಿಕವಾಗಿ ಆಗುತ್ತಿರುವ ನಷ್ಟವೆಷ್ಟು; ಈ ನಷ್ಟಕ್ಕೆ ಕಾರಣರಾದವರ ಮೇಲೆ ಸರ್ಕಾರ ಕೈಗೊಳ್ಳುವ ಕ್ರಮವೇನು;

(ಇ) ನಗರಸಭೆಯು ಬಾಡಿಗೆಗೆ ನೀಡಿರುವ ಕಟ್ಟಡಗಳ/ಖಾಲಿ ಜಾಗಗಳ ೨೦೨೩–೨೪ರಲ್ಲಿ ಬೇಡಿಕೆಯ ಹಾಗೂ ವಸೂಲಾದ ಮೊತ್ತವೆಷ್ಟು;

(ಈ) ಸಾರ್ವಜನಿಕರಿಗೆ ಖಾತಾ ಮಾಡಿಕೊಳ್ಳಲು ವಿಳಂಬ ಮಾಡುತ್ತಿರುವುದು ಮತ್ತು ಭ್ರಷ್ಟಾಚಾರ ಮಾಡುತ್ತಿರುವ ಬಗ್ಗೆ ನಗರಸಭೆಯ ಅಧ್ಯಕ್ಷರೇ ಆರೋಪ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇವರ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು; ೨೦೨೩–೨೪ರಲ್ಲಿನ ನಗರಸಭೆಯ ಜಮಾ ಮತ್ತು ವೆಚ್ಚದ ಸಂಪೂರ್ಣ ವಿವರ ನೀಡುವುದು?

## ರಾಜ್ಯದಲ್ಲಿ ಜೇನು ಕೃಷಿಯಲ್ಲಿ ತೊಡಗಿಸಿಕೊಂಡಿರುವವರ ಕುರಿತು

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) –**

೮೫ (೮೪೯) ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಜೇನು ಕೃಷಿಯಲ್ಲಿ ತೊಡಗಿಸಿಕೊಂಡಿರುವವರ ಸಂಖ್ಯೆ ಎಷ್ಟು; ಹಾಗೂ ಉತ್ಪಾದನೆಯಾಗುತ್ತಿರುವ ಜೇನು ತುಪ್ಪದ ಪ್ರಮಾಣವೆಷ್ಟು;

(ಆ) ಜೇನು ಕೃಷಿಗೆ ಉತ್ತೇಜನ ನೀಡಲು ಸರ್ಕಾರ ಜೇನು ಕೃಷಿಯಲ್ಲಿ ಹೆಚ್ಚಿನ ಜ್ಞಾನವಿರುವ ಬುಡಕಟ್ಟು ಜನರಿಗೆ ವಿಶೇಷ ಒತ್ತು ನೀಡುತ್ತಿದೆಯೇ;

(ಇ) ಜೇನು ಕೃಷಿಗೆ ಉತ್ತೇಜನ ನೀಡಲು ಸರ್ಕಾರ ರೂಪಿಸಿರುವ ಕಾರ್ಯಕ್ರಮ ಮತ್ತು ಯೋಜನೆಗಳು ಹಾಗೂ ವಿನಿಯೋಗಿಸುತ್ತಿರುವ ಅನುದಾನ ಎಷ್ಟು ವಿವರಿಸಿ? (ವಿವರ ನೀಡುವುದು)

## ಡಿ. ದೇವರಾಜ್ ಅರಸು ಟ್ರಕ್ ಟರ್ಮಿನಲ್‌ನಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ

**ಶ್ರೀ ಗೋವಿಂದರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೮೬ (೭೫೦) ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಡಿ. ದೇವರಾಜ್ ಅರಸು ಟ್ರಕ್ ಟರ್ಮಿನಲ್ ಸಂಸ್ಥೆಯಿಂದ ಕಳೆದ ೦೫ ವರ್ಷದ ಅವಧಿಯಲ್ಲಿ ಎಷ್ಟು ಟರ್ಮಿನಲ್‌ಗಳನ್ನು ನಿರ್ಮಾಣ ಮಾಡಲಾಗಿದೆ; ಇದರ ಒಟ್ಟಾರೆ ಮೊತ್ತವೆಷ್ಟು;

(ಆ) ಸಂಸ್ಥೆಯಿಂದ ಯಾವುದೇ ಕಾಮಗಾರಿಗಳನ್ನು ನಡೆಸದೆ ೬೬೮ ಕಾಮಗಾರಿಗಳ ಹೆಸರಿನಲ್ಲಿ ನಕಲಿ ಬಿಲ್ ಸೃಷ್ಟಿಸಿ ಸುಮಾರು ರೂ.೩೯.೪೨ ಕೋಟಿ ರೂಪಾಯಿಗಳನ್ನು ಅಕ್ರಮವಾಗಿ ಪಡೆದು ಸಂಸ್ಥೆಗೆ ಮೋಸ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು; ಈ ಅಕ್ರಮದಲ್ಲಿ ಭಾಗಿಯಾಗಿರುವವರು ಯಾರು; (ಪೂರ್ಣ ಮಾಹಿತಿ ಒದಗಿಸುವುದು)

(ಈ) ಈ ಅಕ್ರಮಗಳು ೨೦೨೧ ರಿಂದ ೨೦೨೩ರ ಅವಧಿಯಲ್ಲಿ ನಡೆದಿವೆ ಎಂಬುದಾಗಿ ಸಿಎಜಿ ವರದಿಯಿಂದ ಬಹಿರಂಗಗೊಂಡಿದ್ದು, ಅದಕ್ಕೂ ಮೊದಲು ಸರ್ಕಾರದ ಹಂತದಲ್ಲಿ ಯಾವ ಅಧಿಕಾರಿಗಳ ಗಮನಕ್ಕೆ ಬರಲಿಲ್ಲವೇ; ಹಾಗಿದ್ದಲ್ಲಿ, ಇದಕ್ಕೆ ಜವಾಬ್ದಾರರು ಯಾರು ಹಾಗೂ ಅಕ್ರಮವಾಗಿ ಪಡೆದಿರುವ ಹಣವನ್ನು ಹಿಂಪಡೆಯಲು ಯಾವ ಕ್ರಮತೆಗೆದುಕೊಂಡಿದೆ?

## ತೋಟಗಾರಿಕೆ ಬೆಳೆ ಹಾನಿಯ ಕುರಿತು

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) –**

೮೭ (೮೦೨) ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಬರಗಾಲಕ್ಕೆ ತುತ್ತಾಗಿ ಹಾನಿಗೀಡಾದ ತೋಟಗಾರಿಕೆ ಬೆಳೆಗಳಾದ ಲಿಂಬೆ, ದಾಳಿಂಬೆ ಹಾಗೂ ದ್ರಾಕ್ಷಿ ಬೆಳೆಗಳಿಗೆ ಸರ್ಕಾರದಿಂದ ಸಹಾಯಧನ (ಬರ ಪರಿಹಾರ) ಒದಗಿಸಲಾಗಿದೆಯೇ; (ಜಿಲ್ಲಾವಾರು ವಿವರ ನೀಡುವುದು)

(ಆ) ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ತೋಟಗಾರಿಕಾ ಬೆಳೆಗಳಾದ ಲಿಂಬೆ, ದಾಳಿಂಬೆ ಹಾಗೂ ದ್ರಾಕ್ಷಿ ಬೆಳೆಗಳು ಬರಗಾಲದಿಂದ ಒಣಗಿ ಫಲ ಸಿಗದೆ ರೈತರು ಹಣ್ಣಿನ ಗಿಡಗಳನ್ನು ಕಿತ್ತುಹಾಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;

(ಇ) ದ್ರಾಕ್ಷಿ ಬೆಳೆಗಾರರು ಬರಗಾಲ ಹಾಗೂ ಬೆಳೆದ ಬೆಳೆಗೆ ಬೆಲೆಯಿಲ್ಲದೆ ತುಂಬಾ ಸಂಕಷ್ಟದಿಂದ ಬಳಲುತ್ತಿದ್ದು, ಅವರ ನೆರವಿಗೆ ಸರ್ಕಾರ ಕೈಗೊಂಡ ಕ್ರಮಗಳೇನು; ದ್ರಾಕ್ಷಿ ಬೆಳೆಗಾರರ ದೀರ್ಘಾವಧಿ ಸಾಲವನ್ನು ಮನ್ನಾ ಮಾಡುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ? (ವಿವರ ನೀಡುವುದು)

## ಭೂ ಪರಿವರ್ತಿತ ವಿನ್ಯಾಸ ನಕ್ಷೆ ಅನುಮೋದನೆ ಕುರಿತು

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) –**

೮೮ (೭೭೯) ಪೌರಾಡಳಿತ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಭೂ ಪರಿವರ್ತಿತ ವಿನ್ಯಾಸ ನಕ್ಷೆ ಅನುಮೋದನೆಯ ಅಧಿಕಾರವನ್ನು ನಗರ ಸ್ಥಳೀಯ ಸಂಸ್ಥೆಗಳಿಂದ ಕಸಿದು ಯೋಜನಾ ಪ್ರಾಧಿಕಾರಕ್ಕೆ ನೀಡಿರುವುದರಿಂದ ಸಾರ್ವಜನಿಕರು ಮನೆ, ಕಟ್ಟಡ ನಿರ್ಮಾಣ ಬ್ಯಾಂಕ್ ಸಾಲ ಪಡೆಯುವ ಉದ್ದೇಶದಿಂದ ಭೂ ಪರಿವರ್ತನೆ ವಿನ್ಯಾಸ ನಕ್ಷೆ ಪಡೆಯಲು ಅನಗತ್ಯ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದಲ್ಲಿ, ನಗರ ಸ್ಥಳೀಯ ಸಂಸ್ಥೆಗಳಿಗೆ ಬಂದಿರುವ ಅರ್ಜಿಗಳನ್ನು ಯೋಜನಾ ಪ್ರಾಧಿಕಾರಕ್ಕೆ ಅನುಮೋದನೆಗಾಗಿ ಕಳುಹಿಸಿಕೊಟ್ಟರೂ ಸಮರ್ಪಕ ದಾಖಲೆಗಳ ಕೊರತೆಯ ನೆಪ ಮಾಡಿ ಅರ್ಜಿಗಳನ್ನು ಮತ್ತೆ ನಗರ ಸ್ಥಳೀಯ ಸಂಸ್ಥೆಗಳಿಗೆ ವಾಪಸ್ ಕಳುಹಿಸುವುದು ಹಾಗೂ ಪ್ರಾಧಿಕಾರಗಳಲ್ಲಿ ಸಿಬ್ಬಂದಿ ಕೊರತೆ ಇರುವುದರಿಂದ ನಿಗದಿತ ಸಮಯದೊಳಗೆ ಸ್ಥಳ ಪರಿಶೀಲನೆ ಮಾಡಲು ಕೂಡ ಸಾಧ್ಯವಾಗದೆ, ದೀರ್ಘಕಾಲದ ವಿಳಂಬಕ್ಕೆ ಕಾರಣವಾಗುತ್ತಿರುವ ಈ ಪ್ರಕ್ರಿಯೆ ಬದಲಿಸುವ ಕುರಿತು ಸರ್ಕಾರ ಇದುವರೆವಿಗೂ ಯಾವುದೇ ಕ್ರಮ ವಹಿಸದಿರಲು ಕಾರಣಗಳೇನು;

(ಇ) ಯಾವ ಕಾಲಮಿತಿಯೊಳಗೆ ಸದರಿ ಅವೈಜ್ಞಾನಿಕ, ಅವಾಸ್ತವಿಕ ಆದೇಶವನ್ನು ಬದಲಾಯಿಸಿ ಆ ಮೂಲಕ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯನ್ನು ನಿವಾರಿಸಲಾಗುವುದು?

## ರಾಜ್ಯದಲ್ಲಿ ಅಕ್ರಮವಾಗಿ ಮರಳು ಸಾಗಾಣಿಕೆ ಮಾಡುತ್ತಿರುವ ಬಗ್ಗೆ

**ಶ್ರೀ ಅಬ್ದುಲ್ ಜಬ್ಬರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೮೯ (೮೦೭) ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಮರಳು ನೀತಿ ಕಾಯ್ದೆ ಈಗ ಯಾವ ಹಂತದಲ್ಲಿದೆ; ರಾಜ್ಯದಲ್ಲಿ ಮರಳು ಸಾಗಾಣಿಕೆ ಮಾಡಲು ಇರುವ ಮಾನದಂಡಗಳೇನು; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಸಾರ್ವಜನಿಕರು ಮರಳನ್ನು ಪಡೆಯಲು ಸರ್ಕಾರ ನಿಗದಿಪಡಿಸಿರುವ ಮೊತ್ತವೆಷ್ಟು; ಇದರಿಂದ ಕಳೆದ ಒಂದು ವರ್ಷದಲ್ಲಿ ಸರ್ಕಾರಕ್ಕೆ ಬಂದ ಆದಾಯವೆಷ್ಟು; (ಸಂಪೂರ್ಣ ಮಾಹಿತಿಯೊಂದಿಗೆ ವಿವರ ನೀಡುವುದು)

(ಇ) ಮರಳು ಸಾಗಾಣಿಕೆ ನಡೆಸಲು ಸರ್ಕಾರಕ್ಕೂ ಹಾಗೂ ಖಾಸಗಿಯವರಿಗೂ ಇರುವ ವ್ಯತ್ಯಾಸಗಳೇನು; (ವಿವರ ನೀಡುವುದು)

(ಈ) ದಾವಣಗೆರೆ ಜಿಲ್ಲೆಯ ತುಂಗಾಭದ್ರ ನದಿ ಭಾಗದಲ್ಲಿ ಬರುವ ಮರಳನ್ನು ಗಣಿಗಾರಿಕೆ ನಡೆಸಲು ಯಾರಿಗೆ ನೀಡಲಾಗಿದೆ; ಅದರ ಷರತ್ತುಗಳು ಯಾವುವು; (ವಿವರ ನೀಡುವುದು)

(ಉ) ರಾಜ್ಯದಲ್ಲಿ ಅಕ್ರಮ ಮರಳು ಸಾಗಾಣಿಕೆ ಹೆಚ್ಚಾಗುತ್ತಿದ್ದು, ಸದರಿ ಅಕ್ರಮಗಳನ್ನು ಎಸಗುತ್ತಿರುವವರ ವಿರುದ್ಧ ಸರ್ಕಾರ ಕೈಗೊಳ್ಳಲಿರುವ ಕಠಿಣ ಕ್ರಮಗಳಾವುವು?

## ನಗರ ಸಭೆಗಳಲ್ಲಿ ನಿರ್ಮಿಸುತ್ತಿರುವ ಬಡಾವಣೆಗಳ ಬಗ್ಗೆ

ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –

೯೦ (೮೩೬) ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಖಾಸಗಿ ಸಹಭಾಗಿತ್ವದಿಂದ ನಿರ್ಮಿಸುತ್ತಿರುವ ಬಡಾವಣೆಗಳ ಸಂಖ್ಯೆ ಎಷ್ಟು; (ನಗರಸಭೆವಾರು ವಿವರ ಒದಗಿಸುವುದು)

(ಆ) ಕಳೆದ ಒಂದು ವರ್ಷದಿಂದ ಎಷ್ಟು ಜಮೀನನ್ನು ನಿವೇಶನಗಳನ್ನಾಗಿ ಪರಿವರ್ತಿಸಲಾಗಿದೆ; (ವಿವರ ಒದಗಿಸುವುದು)

(ಇ) ನಿವೇಶನಗಳನ್ನು ವಿತರಿಸಲು ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು; (ಸಂಪೂರ್ಣ ಮಾಹಿತಿ ಒದಗಿಸುವುದು)

(ಈ) ನಿವೇಶನಗಳನ್ನು ಯಾವ ಯಾವ ವಿಸ್ತೀರ್ಣಗಳಲ್ಲಿ ಪರಿವರ್ತಿಸಲಾಗಿದೆ? (ವಿಸ್ತೀರ್ಣಗಳ ಪಟ್ಟಿ ಮತ್ತು ಅದರ ಮೊತ್ತದ ವಿವರವನ್ನು ಪ್ರತ್ಯೇಕವಾಗಿ ಒದಗಿಸುವುದು)

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ. ವಿಕಾಸ ಸೌಧ ಘಟಕ. ಬೆಂಗಳೂರು. ಕಾಸೂ – 269 ಪ್ರತಿಗಳು – (ಎ6)

**List of Questions for Oral Answers**

**Total No. of Questions - 15**

# LIST - 06

# KARNATAKA LEGISLATIVE COUNCIL

## ONE HUNDRED AND FIFTY THIRD SESSION

## Tuesday, the 23rd July, 2024

**GROUP - II**

1. Minister for Large and Medium Scale Industries and Infrastructure Development
2. Minister for Textiles, Sugarcane Development and Sugar and Agricultural Marketing
3. Minister for Small Scale Industries and Public Enterprises
4. Minister for Mines and Geology and Horticulture
5. Minister for Municipalities and Haj
6. Minister for Co-operation
7. Minister for Urban Development and Town Planning

**IRON COMPONENT IN THE SOIL OF KAPPATAGUDDA SURROUNDINGS**

**Sri. S.V. Sankanur (Graduates' Constituency)-**

76 (803) Will the Minister for Mines and Geology and Horticulture be pleased to state:-

a) whether it is true that there is a iron component in the soil of Kappatagudda surroundings of Gadag district;

b) whether it has come to the notice of the Government that in recent days the land grabbers are digging soil containing iron component during the night itself and collecting in secret places near Petalooru, Halligudi, Hallikeri villages of Lakkundi and Mundargi taluk;

c) the reasons for not taking any actions against the land grabbers who are illegally digging the soil containing iron component during the night by the officers of the department of mines and geology, even though the complaint has been lodged by the surrounding villagers; if so, the actions which will be taken against them?

## INVESTIGATION REPORT ON IRREGULARITIES IN BIDAR URBAN DEVELOPMENT AUTHORITY

**Sri. U.B. Venkatesh (Nominated)-**

77 (748) Will the Minister for Urban Development and Town Planning be pleased to state:-

a) whether it is true that the investigation report has been submitted to the Government by two investigation teams that have been appointed with regard to complaint of crores of rupees irregularities that have been occurred in Bidar Urban Development Authority;

b) if investigation report has been submitted, the highlights of the report;

c) whether the Government has ordered for lodging a criminal complaint against the former president in the report;

d) if ordered, the reasons for not lodging the criminal case so far?

## ESTABLASHMENT OF SEMICONDUCTOR COMPANIES IN THE STATE

**Sri. K.A. Thippeswamy (Nominated)-**

78 (759) Will the Minister for Large and Medium Scale Industries and Infrastructure Development be pleased to state:-

a) several nations are involved in the manufacturing of semi conductor chips across the world, whether it has come to the notice of the Government that the national policy has been released for manufacturing of semiconductor chip by India;

b) if so, the particulars of outlines of this national policy; and the particulars of assistance and facilities that are available from the Central and State Government for the semiconductor manufacturing companies under this scheme; (complete information be furnished)

c) the particulars of steps taken by the State Government to establish the factory by attracting the semiconductor chip manufacturing companies in the State; (complete information be furnished)

d) the place where semiconductor manufacturing companies have been established till date in the State? (complete information be furnished)

## ASSISTANCE FOR FLORICULTURE

**Sri. N. Ravikumar (Elected by Legislative Assembly)-**

79 (742) Will the Minister for Mines and Geology and Horticulture be pleased to state:-

a) the particulars of types of flowers for which the assistance is being provided to grow by the Horticulture department in the State; the names of important flowers, which have been grown in the State along with details be furnished;

b) the quantum of flowers that are being exported by the State; the kinds of assistance that is being provided by the Government for farmers to increase the exporting quantity of flowers; (details be furnished)

c) the steps taken by the Government for the development of flowers breedings and to the research of the new breedings which have been used more globally;

d) the amount that has been spent by the Government for the development and research of flower breeding during the last two years and the number of farmers who have been identified as floriculturists? (districtwise and cropwise details be furnished)

## ESTABLISHMENT OF LARGE SCALE INDUSTRIES IN DISTRICTS OF KALYANA-KARNATAKA REGION

**Sri. Shashil G.Namoshi (Teachers' Constituency)-**

80 (804) Will the Minister for Large and Medium Scale Industries and Infrastructure Development be pleased to state:-

a) the steps taken by the Government for the establishment of various industries to create the employment opportunities in the district of Kalyana-Karnataka region; (details be furnished)

b) the particulars of the companies that have been made memorandum of understanding (MOU) to invest the capital for the establishment of the industries in this region during the last two years;

c) whether the Government has organized investors' meet in the State during the last two years; if so, the particulars of memorandum of understanding (MOU) that have been signed in this investors' meet ;

d) the particulars of steps taken by the Governments for making the capital investment in the districts of Kalyana-Karnataka region?

## HARM CAUSED BY DRINKING OF CONTAMINATED WATER

**Sri. Arun D.S (Local Authorities Constituency)-**

81 (790) Will the Minister for Urban Development and Town Planning be pleased to state:-

a) the particulars of places where the contaminated water supply cases have been occurred in the State; the number of persons who have lost their lives due to

consumption of contaminated water; (districtwise information be furnished)

b) the particulars facts which are leading to the supply of contaminated water;

c) the particulars of places where there is a scarcity of drinking water; the measures taken by the Government to supply pure water to such places?

## REGARDING WAIVING OFF FARMERS' LOAN

**Sri. C.T. Ravi (Elected by Legislative Assembly)-**

82 (751) Will the Minister for Co-operation be pleased to state:-

a) whether it has come to the notice of the Government that the number of farmers for getting loan to agriculture activities in the co-operative banks of the State are increasing; if so, the steps taken by the Government to increase the agriculture loan; (details be furnished)

b) the number of applications that have been received for crop loan in the co-operative banks during the current year; (districtwise details be furnished)

c) the number of applications that have been rejected and sanctioned which have been received for crop loan from the farmers; total amount of loan that has been granted; (complete details be furnished)

d) whether the step would be taken by the Government for waving off the amount of interest on loan that has been obtained for agriculture activities in co-operative banks; the amount of interest that has been waived off so far; the number of farmers who have benefited from waive off interest on loan; (districtwise details be furnished)

e) whether the Government will take steps to waive off the farmers' loan; the stand of the Government in this regard?

## CONSTRUCTION OF UNAUTHORIZED LAYOUTS

**Sri. Pradeep Shettar (Local Authorities Constituency)-**

83 (770) Will the Minister for Urban Development and Town Planning be pleased to state:-

a) the number of layouts which have got approval for formation in Hubballi-Dharawad urban development authority during the last one year;

b) whether it has come to the notice of the urban development authority that the unauthorized layouts have been formed;

c) the manner in which the step has been taken by the urban development authority with regard to unauthorized layouts;

d) the manner in which the action has been taken by the Government against the officers who have failed to prevent the formation of unauthorized layouts?

## IRREGULARITIES IN SIRA CITY MUNICIPAL COUNCIL

**Sri. Chidanand M.Gowda (Graduates' Constituency)-**

84 (835) Will the Minister for Municipalities and Haj be pleased to state:-

a) the number of properties which are included for the tax in the limit of Sira city municipal Council; the amount of the demand for the same; the amount that has been recovered during 2023-24; the amount of outstanding tax; the measures that has been taken for recovery of the said tax;

b) the date on which the auction of the place of vegetable and flower market has been carried out; the duration of the same; whether it has come to the notice of the Government that the amount is being recovered from the previous auctioneers even though the duration of auction has been expired; the loss that is being occurred for the city municipal council from the same; the details of the action that would be taken by the Government against the persons who are reason for the loss;

c) the details of demand and the recovered amount in the year 2023-24 for the building/vacant places that have been given on rent by the city municipal council;

d) whether it has come to the notice of the Government that the city municipal council President himself is alledging with regard to the delay and corruption that is being occurred to make khatha for public; if so, the action taken by the Government against the same; the complete details of receipts and expenses of city municipal Council during 2023-24 be furnished?

## APICULTURE IN THE STATE

**Sri. Shantharama Budna Siddi (Nominated)-**

85 (849) Will the Minister for Mines and Geology and Horticulture be pleased to state:-

a) the number of persons who have engaged in apiculture in the State; and the quantum of honey produced;

b) whether the Government is focusing to promote the apiculture by giving special emphasis to tribal people who have more knowledge in the same;

c) details of the programmes and schemes that have been chalked out by the Government to promote the apiculture; and the details of the grant that is being utilised? (details be furnished)

## IRREGULARITIES IN D.DEVARAJ URS TRUCK TERMINALS LIMITED

**Sri. Govinda Raju (Elected by Legislative Assembly)-**

86 (750) Will the Minister for Co-operation be pleased to state:-

a) the number of terminals that have been constructed by D.Devaraj Urs truck terminals limited during the last 05 years; the total amount there of;

b) whether it has come to the notice of the Government that the fraudulence has been caused to the terminals

limited by getting approximately 39:42 cores of rupees illegally by creating fake bills in the name of 668 works without executing of any works by the terminal limited;

c) if so, the steps taken by the Government in this regard; the persons who have involved in this irregularity; (complete information be furnished)

d) the CAG report has been reveled that this irregularities have been occurred from 2021 to 2023, whether it is not come to the notice of any officers in Government level earlier; if so, the person who are responsible for the same and the particulars of step that has been taken for the recovery of the amount that has been got illegally?

**REGARDING HORTICULTURE CROP LOSS**

**Sri. Keshava Prasad S. (Elected by Legislative Assembly)-**

87 (802) Will the Minister for Mines and Geology and Horticulture be pleased to state:-

a) whether the financial assistance (drought compensation) has been provided by the Government for the horticulture crops such as lemon, pomegranate and grapes which have been damaged due to drought in the State; (district wise details be furnished)

b) whether it has come to the notice of the Government that the farmers have deracinated the plant of fruits of horticulture crops such as lemon, pomegranate, and grapes in several districts of North Karnataka without getting yield due to drought;

c) the severe hardship is being faced by the grapes grovers due to drought and without getting good price for the crops that have been grown by them, the steps taken by the Government for their assistance; whether the proposal is before the Government to waive off the long-term loan of grape growers? (details be furnished)

## REGARDING LAND CONVERSION PLAN APPROVAL

**Sri. Prathap Simha Nayak K. (Elected by Legislative Assembly)-**

88 (779) Will the Minister for Municipalities and Haj be pleased to state:-

a) whether it has come to the notice of the Government that unnecessary delay is being caused to get land conversion plan approval for the purpose of house building construction and getting bank loans to public due to the power of land conversion, plan approval has been handed over to planning authority by taking away from urban local bodies;

b) if so, even though applications have been sent to the planning authority for approval from urban local bodies, the applications have been returned again to urban local bodies in the pretext of inadequacy of proper documents and due to the shortage of staff in the authority it is not possible to conduct the spot inspection within the prescribed time, the reasons for not initiating any action by the Government till date regarding to changing this process which is reason for causing long-term delay;

c) the time limit within which the problem which is faced by the public would be resolved through changing the said unscientific, unrealistic order?

## TRANSPORTATION OF SAND ILLEGALLY IN THE STATE

**Sri. K. Abdul Jabbar (Elected by Legislative Assembly)-**

89 (807) Will the Minister for Mines and Geology and Horticulture be pleased to state:-

a) the present stage of the Sand Policy Act in the State; the prevailing criteria for transportation of Sand in the State; (complete information be furnished)

b) the amount that has been fixed by the Government to get the sand by public; the revenue that has been accrued to the exchequer of the Government during the

last one year from the same; (details along with complete information be furnished)

c) the differences between the Government and private persons for transportation of the sand; (details be furnished)

d) the name of the agency to whom the permission has been given to conduct the mining of sand which coming in the region of Tungabhadra river in Davanagere district; the particulars of conditions there of; (details be furnished)

e) the illegal sand mining is being increased in the State the particulars of stringent action that would be taken by the Government against the persons who are involving in the illegal sand activities?

## LAYOUTS IN CITY MUNCIPAL COUNCILS

**Sri. Naveen K.S (Local Authorities Constituency)-**

90 (836) Will the Minister for Urban Development and Town Planning be pleased to state:-

a) the number of layouts which have been formed by the private partnership in the State; (city municipal councilwise details be furnished)

b) the extent of land that has been converted into sites during the last one year; (details be furnished)

c) the number of applications which have been pending for allotment of sites; (complete information be furnished)

d) the particulars of dimension in which the sites have been converted? (details of list of dimension and the amount separately be furnished)

**K.R. MAHALAKSHMI**
Secretary
Karnataka Legislative Council